# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಮಂಗಳವಾರ, ೦೯ ಸೆಪ್ಟೆಂಬರ್, ೨೦೨೫ (ಭಾದ್ರಪದ ೧೮, ಶಕವರ್ಷ ೧೯೪೭)<br>BENGALURU, TUESDAY, 09 SEPTEMBER, 2025 (BHADRAPADA 18, SHAKAVARSHA 1947) | ನಂ. ೫೪೯<br>No.549 |
|---|---|---|


## <u>ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ</u>
## <u>ಅಧಿಸೂಚನೆ</u>
## <u>ಸಂಖ್ಯೆ: ಸಂವ್ಯಶಾಇ 71 ಶಾಸನ 2025, ಬೆಂಗಳೂರು, ದಿನಾಂಕ: 09.09.2025</u>

ಕರ್ನಾಟಕ ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕಾತಿ ಅಧಿನಿಯಮ, 2025 ಇದಕ್ಕೆ 2025ರ ಸೆಪ್ಟೆಂಬರ್ ತಿಂಗಳ 9ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2025ರ ಕರ್ನಾಟಕ ಅಧಿನಿಯಮ ಸಂಖ್ಯೆ: 45 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

## 2025 ರ ಕರ್ನಾಟಕ ಅಧಿನಿಯಮ ಸಂಖ್ಯೆ: 45

(2025ರ ಸೆಪ್ಟೆಂಬರ್ ತಿಂಗಳ 9ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕಾತಿ ಅಧಿನಿಯಮ, 2025

(2025ರ ಸೆಪ್ಟೆಂಬರ್ ತಿಂಗಳ 9ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ರಾಜ್ಯದಲ್ಲಿ ಲೆಕ್ಕವಿಲ್ಲದಷ್ಟು ಸಂಖ್ಯೆಯ ಗುತ್ತಿಗೆದಾರರು, ಸಾಗಣಿಕೆದಾರರು, ರಫ್ತುದಾರರು, ದಾಸ್ತಾನು ಧಾರಕರು, ಖರೀದಿದಾರರು ಮತ್ತು ಇತರ ಮಧ್ಯವರ್ತಿಗಳು ಸೇರಿದಂತೆ ಬಹು-ವಹಿವಾಟುಗಳನ್ನು ಒಳಗೊಂಡ ಅಕ್ರಮ ಗಣಿಗಾರಿಕೆ ಚಟುವಟಿಕೆಗಳಿಂದ, ಸಂಘಟಿತ ಅಪರಾಧ, ವ್ಯವಸ್ಥಿತ ಒಳಸಂಚು ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲು, ಜಪ್ತಿ ಮಾಡಲು, ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ವಸೂಲಾತಿ ಆಯುಕ್ತರ ನೇಮಕಾತಿಗಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 562/2009ರ ವಾದಕಾಲೀನ ಅರ್ಜಿ ಸಂಖ್ಯೆ 189ಕ್ಕೆ 16/9/2013 ರಂದು ನೀಡಿದ ತನ್ನ ಆದೇಶದಲ್ಲಿ, 50000 MTSಗಳಿಗಿಂತ ಕಡಿಮೆ ರಫ್ತು ಮಾಡಿದ ಮತ್ತು ಪ್ರಾಥಮಿಕ ವಿಚಾರಣೆಯಲ್ಲಿ ವಿಚಾರಣೆಗೆ ಒಳಪಡದ ರಫ್ತುದಾರರಿಗೆ ಸಂಬಂಧಿಸಿದ ವಿಷಯಗಳನ್ನು ಉಲ್ಲೇಖಿಸಲು ಸಿಬಿಐ-ಗೆ ಅನುಮತಿಯನ್ನು ನೀಡಿದ್ದು ಮತ್ತು 50000

MTS ಗಿಂತ ಕಡಿಮೆ ಕಬ್ಬಿಣದ ಅದಿರನ್ನು ಸಿಂಧುವಾದ ಪರವಾನಗಿ ಇಲ್ಲದೆ ರಫ್ತು ಮಾಡಿದ ರಫ್ತುದಾರರ ಪ್ರಕರಣಗಳನ್ನು ಸಹ ಸಂಬಂಧಿತ ಕಾನೂನುಗಳ ಅಡಿಯಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ದಿನಾಂಕ 5.9.2012ರ ಕೇಂದ್ರ ಅಧಿಕಾರಯುಕ್ತ ಸಮಿತಿಯ ಶಿಫಾರಸ್ಸಿನಂತೆ ಕರ್ನಾಟಕ ಸರ್ಕಾರಕ್ಕೆ ಉಲ್ಲೇಖಿಸಲು ಸಹ ಸಿಬಿಐ-ಗೆ ಅನುಮತಿಯನ್ನು ನೀಡಿರುವುದರಿಂದ.

ಮತ್ತು, 17-10-2013ರಂದು ಕೈಗೊಳ್ಳಲಾದ ಸಚಿವ ಸಂಪುಟದ ತೀರ್ಮಾನಗಳಿಗೆ ಅನುಸಾರವಾಗಿ ಒಂಭತ್ತು ಬಂದರುಗಳ ಮೂಲಕ ಕಬ್ಬಿಣದ ಅದಿರುಗಳ ಕಾನೂನು ಬಾಹಿರ ರಫ್ತುಗಳಿಗೆ ಸಂಬಂಧಿಸಿದ ವಿಷಯಗಳನ್ನು ಸರ್ಕಾರದ ಆದೇಶ ಸಂಖ್ಯೆ: ಎಚ್‌ಡಿ 98 ಸಿಐಡಿ 2013, ದಿನಾಂಕ:18-12-2023ರ ಮೂಲಕ ಸಿಬಿಐ-ಗೆ ವಹಿಸಲಾಗಿತ್ತು. ಅದರನುಸಾರ ಸಿಬಿಐ-ನ ಹಲವಾರು ಶಾಖೆಗಳ ಮೂಲಕ ದೋಷಾರೋಪಣ ಪಟ್ಟಿ ಸಲ್ಲಿಸಿ ನೋಂದಾಯಿಸಲಾದ ಪ್ರಕರಣಗಳು, ಪ್ರಾಥಮಿಕ ತನಿಖೆಗಳ ಮಧ್ಯಂತರ ವಿವರಗಳನ್ನು ಸಿಬಿಐ ಒದಗಿಸಿರುವುದರಿಂದ.

ಕರ್ನಾಟಕ ರಾಜ್ಯದಲ್ಲಿ ಲೆಕ್ಕವಿಲ್ಲದಷ್ಟು ಸಂಖ್ಯೆಯ ಗುತ್ತಿಗೆದಾರರು, ಸಾಗಣಿಕೆದಾರರು, ರಫ್ತುದಾರರು, ದಾಸ್ತಾನು ಧಾರಕರು, ಖರೀದಿದಾರರು ಮತ್ತು ಇತರ ಮಧ್ಯವರ್ತಿಗಳು ಸೇರಿದಂತೆ ಬಹು-ವಹಿವಾಟುಗಳನ್ನು ಒಳಗೊಂಡ ಅಕ್ರಮ ಗಣಿಗಾರಿಕೆ ಚಟುವಟಿಕೆಗಳಿಂದ, ಸಂಘಟಿತ ಅಪರಾಧ, ವ್ಯವಸ್ಥಿತ ಒಳಸಂಚು ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲು, ಜಪ್ತಿ ಮಾಡಲು, ಮುಟ್ಟುಗೋಲು ಹಾಕಿಕೊಳ್ಳಲು ಮತ್ತು ವ್ಯವಸ್ಥಾಪನೆಗೆ ವಸೂಲಾತಿ ಆಯುಕ್ತರ ನೇಮಕಾತಿಗಾಗಿ ಹಾಗೂ ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು, ಪ್ರಾರಂಭ ಮತ್ತು ಅನ್ವಯ.-** (1) ಈ ಅಧಿನಿಯಮವನ್ನು ಕರ್ನಾಟಕ ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕಾತಿ ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

(3) ಈ ಅಧಿನಿಯಮದ ಉಪಬಂಧಗಳು ಸರ್ಕಾರದ ಆದೇಶ ಸಂಖ್ಯೆ CI 282 MM 2011(p) ದಿನಾಂಕ:22/11/2013, 06/06/2017, 21/03/2018, 22/11/2024ರಲ್ಲಿ ಉಲ್ಲೇಖಿಸಿರುವ ಎಲ್ಲಾ ಪ್ರಕರಣಗಳಿಗೆ ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ ಇತರ ಪ್ರಕರಣಗಳಿಗೂ ಅನ್ವಯವಾಗತಕ್ಕದ್ದು.

**2. ಪರಿಭಾಷೆಗಳು.-** (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) “ಜಪ್ತಿ” ಎಂದರೆ ವಸೂಲಾತಿ ಆಯುಕ್ತರ ಆದೇಶದ ಮೂಲಕ ಸ್ವತ್ತಿನ ವರ್ಗಾವಣೆ, ವಿಲೇವಾರಿ, ಅಥವಾ ಸ್ಥಾನಾಂತರವನ್ನು ನಿಷೇಧಿಸುವುದು;

(ಬಿ) “ಮುಟ್ಟುಗೋಲು ಹಾಕಿಕೊಳ್ಳುವುದು” ಎಂದರೆ ವಸೂಲಾತಿ ಆಯುಕ್ತರ ಆದೇಶದ ಮೂಲಕ ಸ್ವತ್ತಿನಲ್ಲಿನ ಹಕ್ಕುಗಳನ್ನು ಶಾಶ್ವತವಾಗಿ ವಶಪಡಿಸಿಕೊಳ್ಳುವುದು;

(ಸಿ) "ಅಕ್ರಮ ಗಣಿಗಾರಿಕೆ" ಮತ್ತು "ಅಕ್ರಮ ಗಣಿಗಾರಿಕೆ ಚಟುವಟಿಕೆ" ಎಂದರೆ ಖನಿಜಗಳ ಅಕ್ರಮ ಹೊರತೆಗೆಯುವಿಕೆ, ತೆರವು ಅಥವಾ ಸಾಗಾಣಿಕೆ ಹಾಗೂ ಅಕ್ರಮ ಗಣಿಗಾರಿಕೆ ಚಟುವಟಿಕೆಗಳು, ಗಣಿ ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957 (1957ರ ಕೇಂದ್ರ ಅಧಿನಿಯಮ 67) ಅಥವಾ ಸಂಬಂಧಪಟ್ಟ ಕಾನೂನುಗಳು ಮತ್ತು ಅದರಡಿಯಲ್ಲಿ ಮಾಡಲಾದ ನಿಯಮಗಳ ಉಪಬಂಧಗಳ ಉಲ್ಲಂಘನೆಯಲ್ಲಿ ಲೆಕ್ಕವಿಲ್ಲದಷ್ಟು ಸಂಖ್ಯೆಯ ಗುತ್ತಿಗೆದಾರರು, ಸಾಗಣಿಕೆದಾರರು, ರಫ್ತುದಾರರು, ದಾಸ್ತಾನು ಧಾರಕರು, ಖರೀದಿದಾರರು ಮತ್ತು ಇತರ ಮಧ್ಯವರ್ತಿಗಳು ಸೇರಿದಂತೆ ಬಹು-ವಹಿವಾಟುಗಳು, ಸಂಘಟಿತ ಅಪರಾಧ, ವ್ಯವಸ್ಥಿತ ಒಳಸಂಚನ್ನು ಒಳಗೊಳ್ಳುವುದು;

(ಡಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ಮಾಡಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಇ) "ಸ್ವತ್ತು" ಎಂಬುದು ಲೆಕ್ಕವಿಲ್ಲದಷ್ಟು ಸಂಖ್ಯೆಯ ಗುತ್ತಿಗೆದಾರರು, ಸಾಗಣಿಕೆದಾರರು, ರಫ್ತುದಾರರು, ದಾಸ್ತಾನು ಧಾರಕರು, ಖರೀದಿದಾರರು ಮತ್ತು ಇತರ ಮಧ್ಯವರ್ತಿಗಳು ಸೇರಿದಂತೆ ಬಹು-ವಹಿವಾಟುಗಳು, ಸಂಘಟಿತ ಅಪರಾಧ, ವ್ಯವಸ್ಥಿತ ಒಳಸಂಚನ್ನು ಒಳಗೊಂಡ ಅಕ್ರಮ ಗಣಿಗಾರಿಕೆ ಚಟುವಟಿಕೆಗಳಿಂದ ನೇರವಾಗಿ ಅಥವಾ ಪರೋಕ್ಷವಾಗಿ ಹೊಂದಲಾದ ಅಥವಾ ಪಡೆಯಲಾದ ಯಾವುದೇ ಚರ ಅಥವಾ ಸ್ಥಿರ ಸ್ವತ್ತು, ಹಣ, ಮೌಲ್ಯಯುತ ಭದ್ರತೆ ಅಥವಾ ಇತರ ಆಸ್ತಿಗಳು;

(ಎಫ್) "ವಸೂಲಾತಿ ಆಯುಕ್ತ" ಎಂದರೆ, 3ನೇ ಪ್ರಕರಣದಡಿ ನೇಮಕ ಮಾಡಲಾದ ಅಧಿಕಾರಿ; ಮತ್ತು

(ಜಿ) "ರಾಜ್ಯ ಸರ್ಕಾರ"ಎಂದರೆ ಕರ್ನಾಟಕ ಸರ್ಕಾರ.

(2) ಇಲ್ಲಿ ಬಳಸಲಾದ ಆದರೆ ಪರಿಭಾಷಿಸದಿರುವ ಎಲ್ಲಾ ಇತರ ಪದಗಳು ಮತ್ತು ಪದಾವಳಿಗಳು, ಗಣಿ ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957 (1957ರ ಕೇಂದ್ರ ಅಧಿನಿಯಮ 67) ಅಥವಾ ಇತರ ಸಂಬಂಧಿತ ಕಾನೂನುಗಳು ಮತ್ತು ಅದರಡಿಯಲ್ಲಿ ಮಾಡಲಾದ ನಿಯಮಗಳಲ್ಲಿ ಅವುಗಳಿಗೆ ನೀಡಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು.

**3. ವಸೂಲಾತಿ ಆಯುಕ್ತರ ನೇಮಕಾತಿ.-** ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಅಧಿನಿಯಮದಡಿಯಲ್ಲಿನ ವಸೂಲಾತಿ ವ್ಯವಹರಣೆಗಳನ್ನು ಮೇಲ್ವಿಚಾರಣೆ ಮಾಡುವ ಉದ್ದೇಶಕ್ಕಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ, ಸೇವೆಯಲ್ಲಿರುವ ಅಥವಾ ನಿವೃತ್ತ ಅಧಿಕಾರಿಯನ್ನು ವಸೂಲಾತಿ ಆಯುಕ್ತರನ್ನಾಗಿ ನೇಮಕ ಮಾಡತಕ್ಕದ್ದು.

(2) ವಸೂಲಾತಿ ಆಯುಕ್ತರು ಇಡೀ ರಾಜ್ಯ ಅಥವಾ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು.

(3) ವಸೂಲಾತಿ ಆಯುಕ್ತರು ಈ ಅಧಿನಿಯಮದಡಿಯಲ್ಲಿ ನೇಮಕಗೊಂಡ ವಸೂಲಾತಿ ಅಧಿಕಾರಿಗಳ ಪ್ರಕಾರ್ಯಗಳನ್ನು ಮೇಲ್ವಿಚಾರಣೆ, ಸಮನ್ವಯ ಮತ್ತು ನಿಯಂತ್ರಣ ಮಾಡತಕ್ಕದ್ದು.

**4. ವಸೂಲಾತಿ ಆಯುಕ್ತರ ಅಧಿಕಾರಗಳು ಮತ್ತು ಕರ್ತವ್ಯಗಳು.-** ವಸೂಲಾತಿ ಆಯುಕ್ತರು ಈ ಮುಂದಿನ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು, ಎಂದರೆ:-

(ಎ) ಜಪ್ತಿ, ವಶಪಡಿಸಿಕೊಳ್ಳುವಿಕೆ ಮತ್ತು ವಸೂಲಾತಿ ಕಾರ್ಯಾಚರಣೆಗಳ ಮೇಲೆ ಒಟ್ಟಾರೆ ಮೇಲ್ವಿಚಾರಣಾ ಅಧಿಕಾರವ್ಯಾಪ್ತಿಯನ್ನು ಚಲಾಯಿಸತಕ್ಕದ್ದು;

(ಬಿ) ಜಪ್ತಿ ಅಥವಾ ಮುಟ್ಟುಗೋಲು ಆದೇಶಗಳ ಸಕಾಲಿಕ ಜಾರಿಗಾಗಿ ಅಧೀನ ಅಧಿಕಾರಿಗಳಿಗೆ ನಿರ್ದೇಶನಗಳನ್ನು ನೀಡತಕ್ಕದ್ದು;

(ಸಿ) ವ್ಯಕ್ತಿ ಮತ್ತು ವ್ಯಕ್ತಿಗಳಿಂದ ದೂರುಗಳನ್ನು ಸ್ವೀಕರಿಸತಕ್ಕದ್ದು, ದೂರಿನ ಜೊತೆಯಲ್ಲಿ ಅಫಿಡವಿಟ್ ಸಲ್ಲಿಸುವ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ವಿಚಾರಣೆ ಮಾಡತಕ್ಕದ್ದು;

(ಡಿ) ಅಧೀನ ಅಧಿಕಾರಿಗಳು ಸಲ್ಲಿಸಿದ ದಾಖಲೆಗಳು ಮತ್ತು ವರದಿಗಳನ್ನು ಪರಿಶೀಲಿಸತಕ್ಕದ್ದು;

(ಇ) ಅಧೀನ ಅಧಿಕಾರಿಗಳು ಕೈಗೊಂಡ ಕ್ರಮಗಳ ವಿರುದ್ಧ ಆಡಳಿತಾತ್ಮಕ ಮೇಲ್ಮನವಿಗಳನ್ನು ಆಲಿಸತಕ್ಕದ್ದು;

(ಎಫ್) ಅಗತ್ಯವಿದ್ದಲ್ಲಿ ಹೆಚ್ಚಿನ ಕಾನೂನು ಅಥವಾ ಅಪರಾಧಿಕ ಕ್ರಮವನ್ನು ಶಿಫಾರಸ್ಸು ಮಾಡತಕ್ಕದ್ದು; ಮತ್ತು

(ಜಿ) ರಾಜ್ಯ ಸರ್ಕಾರಕ್ಕೆ ನಿಯತಕಾಲಿಕ ವರದಿಗಳನ್ನು ಸಲ್ಲಿಸತಕ್ಕದ್ದು.

**5. ವಸೂಲಾತಿ ಆಯುಕ್ತರು ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರುವುದು.-** ಅಧಿನಿಯಮದಡಿ ಪ್ರದತ್ತವಾದ ಪ್ರಕಾರ್ಯಗಳನ್ನು ಚಲಾಯಿಸುವಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ ಕೇಂದ್ರ ಅಧಿನಿಯಮ 5)ರ ಅಡಿಯಲ್ಲಿ ಮೊಕದ್ದಮೆಯನ್ನು ವಿಚಾರಣೆ ಮಾಡುವಾಗಿನ ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು, ವಸೂಲಾತಿ ಆಯುಕ್ತರು ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ ಹೊಂದಿರತಕ್ಕದ್ದು, ಎಂದರೆ:-

(ಎ) ಯಾವು ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಹಾಜರಾತಿಯನ್ನು ಜಾರಿಗೊಳಿಸುವುದು ಮತ್ತು ಪ್ರಮಾಣದ ಮೇರೆಗೆ ಆತನ ವಿಚಾರಣೆ ನಡೆಸುವುದು;

(ಬಿ) ಯಾವುದೇ ದಸ್ತಾವೇಜಿನ ಶೋಧ ಮತ್ತು ಹಾಜರುಪಡಿಸುವುದನ್ನು ಅಗತ್ಯಗೊಳಿಸುವುದು;

(ಸಿ) ಅಫಿಡವಿಟ್‌ಗಳ ಮೂಲಕ ಸತ್ಯಾಂಶಗಳ ಪುರಾವೆ;

(ಡಿ) ಸಾಕ್ಷಿ ಅಥವಾ ದಸ್ತಾವೇಜುಗಳ ಪರಿಶೀಲನೆಗಾಗಿ ಆಯೋಗಗಳನ್ನು ನೇಮಿಸುವುದು; ಮತ್ತು

(ಇ) ನಿಯಮಿಸಬಹುದಾದ ಯಾವುದೇ ಇತರ ವಿಷಯಗಳು.

**6. ಪ್ರವೇಶಿಸುವ ಮತ್ತು ಶೋಧಿಸುವ ಅಧಿಕಾರ.-** (1) ವಸೂಲಾತಿ ಆಯುಕ್ತರು ಅಥವಾ ಅವರಿಂದ ಅಧಿಕಾರ ಪಡೆದ ಯಾವುದೇ ಅಧಿಕಾರಿಯು, ಲಿಖಿತವಾಗಿ ಕಾರಣಗಳನ್ನು ದಾಖಲಿಸಿದ ತರುವಾಯ ಮತ್ತು ಯುಕ್ತ ಅಧಿಕಾರದೊಂದಿಗೆ,-

(ಎ) ವಶಪಡಿಸಿಕೊಳ್ಳುವಿಕೆಗೆ ಗುರಿಯಾಗುವ ಯಾವುದೇ ಸ್ವತ್ತನ್ನು ಇರಿಸಲಾಗಿರುವ ಯಾವುದೇ ಆವರಣ ಅಥವಾ ಸ್ಥಳವನ್ನು ಪ್ರವೇಶಿಸಬಹುದು; ಮತ್ತು

(ಬಿ) ವಸೂಲಾತಿಗೆ ಸಂಬಂಧಿಸಿದ ದಸ್ತಾವೇಜುಗಳು, ದಾಖಲೆಗಳು ಅಥವಾ ಸ್ವತ್ತುಗಳಿಗಾಗಿ ಶೋಧವನ್ನು ನಡೆಸಬಹುದು.

(2) ಅಂಥ ಶೋಧವನ್ನು ಶೋಧ ಮತ್ತು ವಶಪಡಿಸಿಕೊಳ್ಳುವಿಕೆಗೆ ಸಂಬಂಧಿಸಿದ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 ಮತ್ತು ಕ್ರಿಮಿನಲ್ ತಿದ್ದುಪಡಿ ಅಧ್ಯಾದೇಶ, 1944ರ ಉಪಬಂಧಗಳ ಅನುಸಾರವಾಗಿ ನಡೆಸತಕ್ಕದ್ದು.

**7. ಸ್ವತ್ತಿನ ತಾತ್ಕಾಲಿಕ ಜಪ್ತಿ.-** (1) ಅಕ್ರಮ ಗಣಿಗಾರಿಕೆಯ ಮೂಲಕ ಆಸ್ತಿಯನ್ನು ಆರ್ಜಿಸಲಾಗಿದೆಯೆಂದು ಯುಕ್ತವಾಗಿ ನಂಬಿರುವ ಮೇರೆಗೆ, ವಸೂಲಾತಿ ಆಯುಕ್ತರು ಅಂಥ ಆಸ್ತಿಯನ್ನು ತಾತ್ಕಾಲಿಕವಾಗಿ ಜಪ್ತಿ ಮಾಡಬಹುದು:

ಪರಂತು, ಕರ್ನಾಟಕ ರಾಜ್ಯದ ಹೊರಗಿನ ಅಕ್ರಮ ಗಣಿಗಾರಿಕೆಯ ಮೂಲಕ ಸ್ವಾಧೀನಪಡಿಸಿಕೊಂಡ ಸ್ವತ್ತಿನ ಸಂದರ್ಭದಲ್ಲಿ, ರಾಜ್ಯ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದ ತರುವಾಯ ವಸೂಲಾತಿ ಆಯುಕ್ತರು ಹಾಗೆ ಮಾಡಬಹುದು.

(2) ಸಕ್ಷಮ ನ್ಯಾಯಾಲಯವು ದೃಢೀಕರಿಸಿದ ಅಥವಾ ತೆರವುಗೊಳಿಸಿದ ಹೊರತು, ತಾತ್ಕಾಲಿಕ ಜಪ್ತಿಯು ಅರವತ್ತು ದಿನಗಳ ಅವಧಿಗಾಗಿ ಜಾರಿಯಲ್ಲಿರತಕ್ಕದ್ದು.

**8. ಜಪ್ತಿ ಅಥವಾ ಮುಟ್ಟುಗೋಲಿನ ದೃಢೀಕರಣ.-** ವಸೂಲಾತಿ ಆಯುಕ್ತರು ಹೊರಡಿಸಿದ ಎಲ್ಲಾ ಜಪ್ತಿ ಮತ್ತು ಮುಟ್ಟುಗೋಲು ಆದೇಶಗಳನ್ನು ರಾಜ್ಯ ಸರ್ಕಾರದ ದೃಢೀಕರಣಕ್ಕಾಗಿ ಸಲ್ಲಿಸತಕ್ಕದ್ದು.

**9. ನಿರುಪಾಧಿಕ ಜಪ್ತಿ.-** (1) ಈ ಅಧಿನಿಯಮ ಅಥವಾ ಸಂಬಂಧಪಟ್ಟ ಅಧಿನಿಯಮದ ಉಪಬಂಧಗಳಡಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ವಸೂಲಾತಿ ಆಯುಕ್ತರು, ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳ ಹೊರತು,-

(i) ಯಾರ ಕುರಿತು ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ವ್ಯಕ್ತಿಯ ಸಂಬಂಧದಲ್ಲಿ ಅಕ್ರಮ ಗಣಿಗಾರಿಕೆಯ ಮೂಲಕ ಸ್ವತ್ತನ್ನು ಆರ್ಜಿಸಿರುವನೆಂದು ನಂಬಲು ಮೇಲ್ನೋಟಕ್ಕೆ ಕಂಡುಬರುವ ಆಧಾರಗಳಿದ್ದರೆ; ಅಥವಾ

(ii) ಅಕ್ರಮ ಗಣಿಗಾರಿಕೆಯ ಮೂಲಕ ಯಾವುದೇ ಹಣ ಅಥವಾ ಇತರ ಸ್ವತ್ತನ್ನು ಸಂಗ್ರಹಿಸಿರುವನೆಂದು,

- ಅಭಿಪ್ರಾಯಪಟ್ಟರೆ, ಕುಟುಂಬ ಸದಸ್ಯರು ಅಥವಾ ಯಾರೇ ಇತರ ವ್ಯಕ್ತಿಗೆ ಪರಭಾರೆ ಮಾಡಲಾದ ಸ್ವತ್ತನ್ನೂ ಒಳಗೊಂಡು, ಹಾಗೆ ಸಂಗ್ರಹಿಸಿರುವನೆಂದು ಅಪಾದಿಸಲಾದ ಹಣ ಅಥವಾ ಇತರ ಸ್ವತ್ತಿನ ಅಥವಾ ಅಂಥ ಹಣ ಅಥವಾ ಇತರ ಸ್ವತ್ತು ಜಪ್ತಿಗಾಗಿ ಲಭ್ಯವಿಲ್ಲದಿರುವುದು ಗೊತ್ತಾದರೆ, ತಾನು ಸೂಕ್ತವೆಂದು ಭಾವಿಸಬಹುದಾದಂತೆ, ಸದರಿ ವ್ಯಕ್ತಿಯ ಸಮಾನ ಮೌಲ್ಯದ ಅಂಥ ಇತರ ಸ್ವತ್ತಿನ ನಿರುಪಾಧಿಕ ಜಪ್ತಿ ಆದೇಶವನ್ನು ಯಾವುದೇ ವಿಳಂಬವಿಲ್ಲದೇ ಹೊರಡಿಸತಕ್ಕದ್ದು;

ಪರಂತು ವಸೂಲಾತಿ ಆಯುಕ್ತರು ಅಂಥ ಆದೇಶವನ್ನು ಹೊರಡಿಸುವ ಮೊದಲು, ಮತ್ತು ಅಂಥ ಅದೇಶ ಹೊರಡಿಸುವುದನ್ನು ನಿರಾಕರಿಸುವ ಮೊದಲು ಆತನು ಸೂಕ್ತವೆಂದು ಭಾವಿಸಿದಲ್ಲಿ ಅರ್ಜಿಯೊಂದಿಗಿನ ಅಫಿಡೆವಿಟ್ಟನ್ನು ಸಲ್ಲಿಸಿದ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ತಪಾಸಣೆ ನಡೆಸಬಹುದು.

(2) ಆತನು ಉಪ-ಪ್ರಕರಣ (1)ರಡಿ ಆದೇಶವನ್ನು ಹೊರಡಿಸುವ ಅದೇ ಸಮಯದಲ್ಲಿ, ವಸೂಲಾತಿ ಆಯುಕ್ತರು ಹಣ ಅಥವಾ ಇತರ ಸ್ವತ್ತು ಜಪ್ತಿಯಾಗಬೇಕಾದ ವ್ಯಕ್ತಿಗೆ ಆದೇಶದ ಪ್ರತಿಗಳು, ಅರ್ಜಿ ಮತ್ತು ಅಫಿಡೆವಿಟ್ಟಗಳು ಹಾಗೂ ಯಾವುದಾದೂ ದಾಖಲಿಸಿದ ಸಾಕ್ಷ್ಯಗಳು ಇದ್ದಲ್ಲಿ ಅವುಗಳೊಂದಿಗೆ ಜಪ್ತಿಯ ಆದೇಶವನ್ನು ಏಕೆ ನಿರುಪಾಧಿಕವಾಗಿ ಮಾಡತಕ್ಕದ್ದಲ್ಲವೆಂದು ನೋಟೀಸಿನಲ್ಲಿ ನಿರ್ದಿಷ್ಟಪಡಿಸಿ ಆತನಿಗೆ ಕಾರಣವನ್ನು ಹೇಳಿಕೊಳ್ಳಲು ದಿನಾಂಕವನ್ನು ನಿಗದಿಪಡಿಸಿ ನೋಟೀಸನ್ನು ನೀಡತಕ್ಕದ್ದು.

(3) ವಸೂಲಾತಿ ಆಯುಕ್ತರು ಉಪ-ಪ್ರಕರಣ (2)ರ ಅಡಿಯಲ್ಲಿ ನೋಟೀಸಿನೊಂದಿಗಿನ ದಸ್ತಾವೇಜುಗಳ ಪ್ರತಿಯ ಜೊತೆಗೆ, ಸದರಿ ಉಪ-ಪ್ರಕರಣದ ಅಡಿಯಲ್ಲಿ ನೋಟೀಸನ್ನು ನೀಡಲಾದ ವ್ಯಕ್ತಿಯ ಸ್ವತ್ತಿನಲ್ಲಿ ಯಾವುದೇ ಹಿತಾಸಕ್ತಿ ಅಥವಾ ಹಕ್ಕನ್ನು ಹೊಂದಿರುವುದಾಗಿ ಅಥವಾ ಕ್ಲೇಮು ಮಾಡಬಹುದಾಗಿ ಮನವಿ ಸಲ್ಲಿಸಿದ ಎಲ್ಲಾ ವ್ಯಕ್ತಿಗಳಿಗೆ, ಸದರಿ ಉಪ-ಪ್ರಕರಣದಡಿ ಪ್ರತಿಯೊಬ್ಬ ವ್ಯಕ್ತಿಯು ಅದೇ ದಿನಾಂಕದಂದು ಹಾಜರಾಗುವಂತೆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿ ಮತ್ತು ಅಂಥ ಸ್ವತ್ತು ಅಥವಾ ಅದರ ಯಾವುದೇ ಭಾಗದಲ್ಲಿ ತನಗೆ ಹಿತಾಸಕ್ತಿ ಇದೆಯೆಂಬ ಆಧಾರದ ಮೇಲೆ ಜಪ್ತಿಗೊಳ್ಳುವ ಸ್ವತ್ತು ಅಥವಾ ಅದರ ಯಾವುದೇ ಭಾಗದ ಕುರಿತು ಆಕ್ಷೇಪಣೆ ಸಲ್ಲಿಸಲು ಪ್ರತಿಯೊಬ್ಬ ವ್ಯಕ್ತಿಯನ್ನು ಅಹ್ವಾನಿಸಿ ಆತನು ಬಯಸಿದಲ್ಲಿ ನೋಟೀಸನ್ನು ಸಹ ನೀಡತಕ್ಕದ್ದು.

(4) ಜಪ್ತಿಯಾದ ಸ್ವತ್ತು ಅಥವಾ ಅದರ ಯಾವುದೇ ಭಾಗಕ್ಕೆ ಬಡ್ಡಿಯನ್ನು ಕ್ಲೇಮ್ ಮಾಡುವ ಯಾರೇ ವ್ಯಕ್ತಿಯು, ಈ ಪ್ರಕರಣದಡಿ ಆತನಿಗೆ ಯಾವುದೇ ನೋಟೀಸನ್ನು ಜಾರಿಗೊಳಿಸದಿದ್ದಾಗ್ಯೂ, ಸಂದರ್ಭಾನುಸಾರವಾಗಿ ಉಪ-ಪ್ರಕರಣ (1) ಅಥವಾ ಉಪ-ಪ್ರಕರಣ (3)ರಡಿ ಆದೇಶವನ್ನು ಹೊರಡಿಸುವ ಯಾವುದೇ ಸಮಯಕ್ಕೆ ಮೊದಲು ವಸೂಲಾತಿ ಆಯುಕ್ತರಿಗೆ ಮೇಲ್ಕಂಡ ಆಕ್ಷೇಪಣೆಯನ್ನು ಸಲ್ಲಿಸಬಹುದು.

**10. ಸ್ವತ್ತಿನ ಮುಟ್ಟುಗೋಲು.-** ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ಅಪರಾಧಕ್ಕಾಗಿ ಅಪರಾಧ ನಿರ್ಣಿತವಾದ ಮೇಲೆ, ಸಕ್ಷಮ ನ್ಯಾಯಾಲಯವು ಅಂಥ ವಿಧಾನಗಳ ಮೂಲಕ ಸ್ವಾಧೀನಪಡಿಸಿಕೊಳ್ಳಬೇಕಾದ್ದೆಂದು ಸಾಬೀತಾದ ಯಾವುದೇ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಬಹುದು.

**11. ಅಪೀಲು.-** ಈ ಅಧಿನಿಯಮದಡಿ ಆಯುಕ್ತರ ಯಾವುದೇ ಆದೇಶದ ವಿರುದ್ಧದ ಅಪೀಲನ್ನು ಸರ್ಕಾರವು ಅಧಿಸೂಚಿಸಿದ ಸರ್ಕಾರದ ಮುಖ್ಯ ಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ಅಧಿಕಾರಿಯ ಮುಂದೆ ಅಂಥ ಆದೇಶದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಅಪೀಲನ್ನು ಮಂಡಿಸತಕ್ಕದ್ದು.

**12. ಜಪ್ತಿ ಮಾಡಲಾದ ಸ್ವತ್ತಿನ ನಿರ್ವಹಣೆ.-** (1) ರಾಜ್ಯ ಸರ್ಕಾರವು ಜಪ್ತಿ ಮಾಡಲಾದ ಸ್ವತ್ತನ್ನು ನಿರ್ವಹಿಸಲು ಆಡಳಿತಾಧಿಕಾರಿಯನ್ನು ಗೊತ್ತುಪಡಿಸಬಹುದು.

(2) ಆಡಳಿತಾಧಿಕಾರಿಯು ಸೂಕ್ತ ಲೆಕ್ಕಪತ್ರಗಳು, ವಿವರಣಾ ಪಟ್ಟಿಗಳನ್ನು ನಿರ್ವಹಿಸತಕ್ಕದ್ದು ಹಾಗೂ ಲೆಕ್ಕಪರಿಶೋಧನೆಯನ್ನು ಅನುಪಾಲಿಸತಕ್ಕದ್ದು.

**13. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.-** ಈ ಅಧಿನಿಯಮದ ಅನುಸರಣೆಯಲ್ಲಿ ರಾಜ್ಯ ಸರ್ಕಾರ ಅಥವಾ ಈ ಅಧಿನಿಯಮದಡಿ ಗೊತ್ತಪಡಿಸಿದ ಯಾರೇ ಅಧಿಕಾರಿಯು

ಸದ್ಭಾವನೆಯಿಂದ ಮಾಡಿದ ಕಾರ್ಯಗಳ ವಿರುದ್ಧ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**14. ನಿಯಮಗಳ ರಚನಾಧಿಕಾರ**.-(1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯನ್ವಯಕ್ಕೆ ಬಾಧಕವಾಗದಂತೆ, ಈ ಮುಂದಿನವುಗಳಿಗಾಗಿ ಅಂಥ ನಿಯಮಗಳನ್ನು ಉಪಬಂಧಿಸಬಹುದು,-

(i) ವಶಪಡಿಸಿಕೊಳ್ಳುವ, ಜಪ್ತಿ ಮಾಡುವ, ಮುಟ್ಟುಗೋಲು ಹಾಕಿಕೊಳ್ಳುವ ಕಾರ್ಯವಿಧಾನಗಳು;

(ii) ರಿಜಿಸ್ಟರುಗಳು, ನೋಟೀಸುಗಳು ಮತ್ತು ವರದಿಗಳ ನಮೂನೆಗಳು;

(iii) ಅಪೀಲುಗಳ ಕಾಲಮಿತಿಗಳು ಮತ್ತು ಕಾರ್ಯವಿಧಾನಗಳು;

(iv) ಸೂಕ್ತವೆಂದು ಭಾವಿಸಬಹುದಾದ ವಸೂಲಾತಿ ಅಧಿಕಾರಿಗಳು ಮತ್ತು ಸಿಬ್ಬಂದಿಯ ನೇಮಕಾತಿ; ಮತ್ತು

(v) ಮುಟ್ಟುಗೋಲು ಹಾಕಿಕೊಳ್ಳಲಾದ ಸ್ವತ್ತು ಅಥವಾ ನಿರುಪಾಧಿಕವಾಗಿ ಜಪ್ತಿ ಮಾಡಲಾದ ಸ್ವತ್ತಿನ ವಿಲೇವಾರಿ ಅಥವಾ ಹರಾಜಿನ ಕಾರ್ಯವಿಧಾನ.

(3) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮ ಅಥವಾ ಅಧಿಸೂಚನೆಯನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಟ್ಟು ಮೂವತ್ತು ದಿನಗಳಿಗಾಗಿ ಒಳಗೊಂಡಿರಬಹುದಾದ ಒಂದು ಅಥವಾ ಎರಡು ಅಥವಾ ಹೆಚ್ಚಿನ ನಿಕಟೋತ್ತರ ಅಧಿವೇಶನಗಳಲ್ಲಿ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ವಿಧಾನಮಂಡಲದ ಉಭಯಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಟುಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ ತರುವಾಯ ಅಂಥ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಥವಾ ಅಧಿಸೂಚನೆಯ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

**15. ಅಧಿನಿಯಮವು ಯಾವುದೇ ಇತರ ಕಾನೂನಿಗೆ ಅಲ್ಪೀಕರಿಸತಕ್ಕದ್ದಲ್ಲ.-** ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿಗೆ ಹೆಚ್ಚುವರಿಯಾಗಿರತಕ್ಕದ್ದು ಮತ್ತು ಅಲ್ಪೀಕರಿಸತಕ್ಕದ್ದಲ್ಲ.

**16. ತಾತ್ಕಾಲಿಕ ಉಪಬಂಧ.-** (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, 3ನೇ ಪ್ರಕರಣದಡಿ ವಸೂಲಾತಿ ಆಯುಕ್ತನನ್ನು ಕ್ರಮಬದ್ಧವಾಗಿ ನೇಮಿಸುವವರೆಗೆ, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಕಂದಾಯ ಇಲಾಖೆ, ಪೊಲೀಸ್ ಇಲಾಖೆ ಅಥವಾ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಪ್ರಸ್ತುತ ಅಧಿಕಾರಿಗಳನ್ನು ವಸೂಲಾತಿ ಆಯುಕ್ತರ ಪ್ರಕಾರ್ಯಗಳನ್ನು ನಿರ್ವಹಿಸಲು ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಆರು ತಿಂಗಳ ಮೀರದ ಅವಧಿಗಾಗಿ ಗೊತ್ತುಪಡಿಸಬಹುದು.

(2) ಹಾಗೆ ಗೊತ್ತುಪಡಿಸಲಾದ ಅಧಿಕಾರಿಗಳು ಕೈಗೊಂಡ ಯಾವುದೇ ಕ್ರಮ, ಹೊರಡಿಸಿದ ಆದೇಶಗಳು ಅಥವಾ ಪ್ರಾರಂಭಿಸಲಾದ ವ್ಯವಹರಣೆಗಳು, ಈ ಅಧಿನಿಯಮದಡಿ ಅಧಿಕೃತಗೊಳಿಸಿದ ಮೇರೆಗೆ ಕಾನೂನು ಸಮ್ಮತವಾಗಿ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

(3) ರಾಜ್ಯಸರ್ಕಾರವು ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಆರು ತಿಂಗಳೊಳಗಾಗಿ ವಸೂಲಾತಿ ಆಯುಕ್ತನ ನೇಮಕಾತಿಯನ್ನೊಳಗೊಂಡು, ಈ ಅಧಿನಿಯಮದಡಿ ಶಾಶ್ವತ ಸಾಂಸ್ಥಿಕ ರೂಪುರೇಷೆ (permanent institutional framework) ಸ್ಥಾಪನೆಯಾಗಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(4) ಗೊತ್ತುಪಡಿಸಲಾದ ಅಧಿಕಾರಿಗಳು ಯುಕ್ತವಾಗಿ ನೇಮಿಸಲಾದ ವಸೂಲಾತಿ ಆಯುಕ್ತರು ಹುದ್ದೆಯನ್ನು ವಹಿಸಿಕೊಂಡ ತಕ್ಷಣ ಎಲ್ಲಾ ದಾಖಲೆಗಳು, ವಿವರಣಾ ಪಟ್ಟಿಗಳು ಮತ್ತು ಬಾಕಿ ವಿಷಯಗಳನ್ನು ಹಸ್ತಾಂತರಿಸತಕ್ಕದ್ದು.

**17. ಬಾಕಿ ಇರುವ ಪ್ರಕರಣಗಳ ವರ್ಗಾವಣೆ.-** ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ, ಲೆಕ್ಕವಿಲ್ಲದಷ್ಟು ಸಂಖ್ಯೆಯ ಗುತ್ತಿಗೆದಾರರು, ಸಾಗಣಿಕೆದಾರರು, ರಫ್ತುದಾರರು, ದಾಸ್ತಾನು ಧಾರಕರು, ಖರೀದಿದಾರರು ಮತ್ತು ಇತರ ಮಧ್ಯವರ್ತಿಗಳು ಸೇರಿದಂತೆ ಬಹು-ವಹಿವಾಟುಗಳನ್ನು ಒಳಗೊಂಡ ಅಕ್ರಮ ಗಣಿಗಾರಿಕೆ ಚಟುವಟಿಕೆಗಳಿಂದ, ಸಂಘಟಿತ ಒಳಸಂಚು ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲು ಮತ್ತು ಜಪ್ತಿ ಮಾಡಲು ಸಂಬಂಧಿಸಿದ, ಯಾವುದೇ ನ್ಯಾಯಾಲಯದ ಮುಂದೆ ಬಾಕಿ ಇರುವ ಎಲ್ಲಾ ಪ್ರಕರಣಗಳನ್ನು ವಸೂಲಾತಿ ಆಯುಕ್ತರಿಗೆ ವರ್ಗಾಯಿಸತಕ್ಕದ್ದು.

**18. ತೊಂದರೆಗಳ ನಿವಾರಣೆ.-** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ, ಯಾವುದೇ ತೊಂದರೆ ಉದ್ಭವಿಸಿದರೆ, ಆ ತೊಂದರೆಯ ನಿವಾರಣೆಗಾಗಿ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದ ತಾನು ಅವಶ್ಯಕ ಅಥವಾ ಯುಕ್ತವೆಂದು ಅಭಿಪ್ರಾಯಪಡುವಂಥ ಉಪಬಂಧಗಳನ್ನು ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಮಾಡಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯಗೊಂಡ ತರುವಾಯ, ಈ ಪ್ರಕರಣದಡಿ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

**DEPARTMENT OF PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 71 SHASANA 2025, BENGALURU, DATED: 09.09.2025**

ಭಾರತ ಸಂವಿಧಾನದ ಅನುಚ್ಛೇದ 348ರಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಕರ್ನಾಟಕ ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕಾತಿ ಅಧಿನಿಯಮ, 2025 (2025ರ ಕರ್ನಾಟಕ ಅಧಿನಿಯಮ ಸಂಖ್ಯೆ: 45)ರ ಭಾಷಾಂತರವನ್ನು ಅಧಿಕೃತ ಆಂಗ್ಲ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

## KARNATAKA ACT NO. 45 OF 2025

(First published in the Karnataka Gazette Extra-ordinary on the 9th day of September, 2025)

## THE KARNATAKA APPOINTMENT OF RECOVERY COMMISSIONER FOR SEIZURE AND ATTACHMENT OF PROPERTY OF ILLEGAL MINING AND PROCEEDS OF ACT, 2025

(Received the assent of the Governor on the 9th day of September, 2025)

An Act to provide for the appointment of Recovery Commissioner for seizure, attachment, forfeiture of properties derived from illegal mining activities including multiple transactions involving myriad number of lessees, transporters, exporters, stock holders, purchasers and other intermediaries, organized crime, cohesive conspiracy and proceeds of crime in the State of Karnataka.

Whereas, the Hon'ble Supreme Court in its Order dated: 16.9.2013 in an interlocutory application number 189 of writ petition 562/2009 has permitted the Central Bureau of Investigation (CBI) to refer the matters with respect to the exporters who had exported less than 50000 MTS and were not enquired into in the preliminary enquiry and also has permitted the Central Bureau of Investigation (CBI) to refer the cases of exporters who had exported less than 50000 MTS of iron ore without valid permit to refer to the Government of Karnataka for taking necessary action under the relevant laws as recommended by the Central Empowered committee vide letter, dated: 5.9.2012.

And whereas, in pursuant to the cabinet decision taken on 17.10.2013, issues relating to the illegal exports of iron ore through nine ports were referred to CBI vide G.O No: HD 98 CID 2013, dated:18.12.2013. Accordingly the CBI has furnished intermittent details of the preliminary enquiries, charge sheeted cases registered by various branches of the Central Bureau of Investigation (CBI).

And whereas, it is expedient to provide for the appointment of Recovery Commissioner for seizure, attachment and forfeiture of properties derived from illegal mining activities including multiple transactions involving myriad number of lessees, transporters, exporters, stock holders, purchasers and other intermediaries, organized crime, cohesive conspiracy and proceeds of crime in the State of Karnataka and for matters connected therewith or incidental thereto.

Be it enacted by the Karnataka State Legislature in the seventy sixth year of the Republic of India as follows:-

**1. Short title, commencement and application.-** (1) This Act may be called the Karnataka Appointment of Recovery Commissioner for seizure and attachment of property of Illegal Mining and proceeds of crime Act, 2025.

(2) It shall come into force from such date as the State Government may, by notification, appoint.

(3) The provisions of this Act shall be applicable to all the cases enumerated in Government order number CI 282 MM 2011(p), dated: 22.11.2013, 06.06.2017, 21.03.2018, 22.11.2024 and to such other cases as may be notified by the State Government, from time to time.

**2. Definitions.-** (1) In this Act, unless the context otherwise requires,-

(a) "attachment" means the prohibition of transfer, disposal, or movement of property by an order of the Recovery Commissioner;

(b) "forfeiture" means the permanent deprivation of rights in property by order of the Recovery Commissioner;

(c) "illegal mining" and "illegal mining activity" means illegal extraction, removal or transportation of minerals and illegal mining activities including multiple transactions involving myriad number of lessees, transporters, exporters, stock holders, purchasers and other intermediaries, organized crime, cohesive conspiracy in contravention of the provisions of the Mines and Minerals (Development and Regulation) Act, 1957 (Central Act 67 of 1957) or relevant Laws and rules made there under;

(d) “prescribed” means prescribed by rules made under this Act;

(e) "property" includes any movable or immovable property, money, valuable security or other assets derived or obtained, directly or indirectly, from illegal mining activities including multiple transactions involving myriad number of lessees, transporters, exporters, stock holders, purchaser and other intermediaries, organized crime, cohesive conspiracy;

(f)“Recovery Commissioner” means the officer appointed under section 3; and

(g) “State Government” means the Government of Karnataka.

(2) All other words and expression used but not defined shall have the same meaning as assigned to them in the Mines and Minerals (Development and Regulation) Act, 1957 (Central Act 67 of 1957) or other relevant Laws and rules made thereunder.

**3. Appointment of Recovery Commissioner.-**(1) The State Government shall, by notification, appoint a serving or retired officer not below the rank of Additional Chief Secretary to Government to be the Recovery Commissioner for the purpose of supervising recovery proceedings under this Act.

(2) The Recovery Commissioner shall have jurisdiction over the entire State or such area as may be specified in the notification.

(3) The Recovery Commissioner shall supervise, coordinate, and control the functions of Recovery Officers appointed under this Act.

**4. Powers and duties of Recovery Commissioner.-** The Recovery Commissioner shall exercise and perform the following powers and duties, namely:-

(a) exercise overall supervisory jurisdiction over attachment, seizure, and recovery operation;

(b) issue directions to subordinate officers for timely enforcement of attachment or forfeiture order;

(c) receive complaints from individuals and persons and examine the person or persons making the affidavit accompanying the complaint;

(d) examine the records and reports submitted by subordinate officer;

(e) hear administrative appeals against actions taken by subordinate officer;

(f) recommend further legal or criminal action where necessary; and

(g) submit periodic reports to the State Government.

**5. Recovery Commissioner to have powers of a civil court.-** In exercising the functions conferred on the Recovery Commissioner under this Act, he shall have all the powers of a civil court, while trying a suit under the Code of Civil Procedure, 1908 (Central 5 of 1908) in respect of the following matters, namely:-

(a) summoning and enforcing the attendance of any person and examining him on oath;

(b) requiring the discovery and production of any document;

(c) proof of facts by affidavits;

(d) appointing commissions for examination of witness or documents; and

(e) any other matter, as may be prescribed.

**6. Power of entry and search.-** (1) The Recovery Commissioner or any officer authorized by him may, after recording reasons in writing and with due authorization,-

(a) enter any premises or place where any property liable for seizure is kept; and

(b) conduct search for documents, records, or assets relevant to recovery.

(2) The search shall be conducted in accordance with the provisions of the Bharatiya Nagarik Suraksha Sanhita, 2023 (Central Act 46 of 2023)and the Criminal Law amendment Ordinance, 1944 relating to search and seizure.

**7. Provisional attachment of property.-**(1) Upon reasonable belief that property was acquired through illegal mining, the Recovery Commissioner may provisionally attach such property:

Provided that, in case of property acquired through illegal mining is situated outside the State of Karnataka, the Recovery Commissioner may do so after obtaining prior approval from the State Government.

(2) The provisional attachment shall remain in force for a period of sixty days unless confirmed or vacated by the Recovery Commissioner.

**8. Confirmation of attachment or forfeiture.-**All orders of attachment and forfeiture passed by a Recovery Commissioner shall be submitted for confirmation by the State Government.

**9. Absolute attachment.-** (1) On receipt of an application under the provisions of this Act, the Recovery Commissioner shall, unless for reasons to be recorded in writing, is of the opinion that,-

(i) there exist prima facie grounds to believe that the person in respect of whom the application is made has acquired property through illegal mining; or

(ii) has procured thereby any money or other property through illegal mining

-shall pass without delay, an absolute order attaching the money or other property alleged to have been so procured, including the property alienated to the family members or any other person or if it transpires that such money or other property is not available for attachment, such other property of the said person of equivalent value, as he may think fit:

Provided that the Recovery Commissioner may, if he thinks fit before passing such order, and shall before refusing to pass such order, examine the person or persons making the affidavit accompanying the application.

(2) At the same time as The Recovery Commissioner passes an order under sub-section (1), he shall issue to the person whose money or other property is being attached, a notice, accompanied by copies of the order, the application and affidavits and of the evidence, if any, recorded, calling upon him to show cause on a date to be specified in the notice, why the order of attachment shall not be made absolute.

(3) The Recovery Commissioner shall also issue, copies of the documents accompanying the notice under sub-section (2), to all persons represented to him as having or being likely to claim, any interest or title in the property of the person to whom notice is issued under the said sub-section calling upon each such person to appear on the same date as specified in the notice under the said sub-section and make objection if he so desires, to the attachment of the property or any portion thereof on the ground that he has an interest in such property or portion thereof.

(4) Any person claiming an interest in the attached property or any portion thereof may, notwithstanding that no notice has been served upon him under this section, make an objection as aforesaid to the Recovery Commissioner at any time before an order is passed under sub-section (1) or sub-section (3), as the case may be.

**10. Forfeiture of property.-** Upon conviction for an offence relating to illegal mining, the Recovery Commissioner may order the forfeiture of any property proven to be acquired through such means.

**11. Appeal.-** An appeal against any order of the Recovery Commissioner under this Act shall lie before the authority, as may be notified by the State Government, not below the rank of Chief Secretary to Government, within sixty days from the date of such order.

**12. Management of attached property.-** (1) The State Government may appoint an Administrator to manage the attached property.

(2) The Administrator shall maintain proper accounts, inventories, and comply with audits.

**13. Protection of action taken in good faith.-**No suit, prosecution or other legal proceeding shall lie against the Government or any officer appointed under the provisions of this Act, for acts done in good faith in pursuance of this Act.

**14. Power to make rules.-** (1)The State Government may, by notification, make rules to carry out the purposes of this Act.

(2) In particular and without prejudice to the generality of the foregoing powers, such rules may provide for,-

(i) procedures for seizure, attachment and forfeiture;

(ii) formats for registers, notices and reports;

(iii) time limits and procedures for appeals;

(iv) appointment of Recovery Officers and staff, as may deem fit; and

(v) procedure of disposal or auction of forfeited property or absolutely attached property.

(3) Every rule made under this Act shall be laid, as soon as may be, after it is made, before each House of the State Legislature, while it is in session for a total period of thirty days which may be comprised in one session or in two or more successive sessions, and if, before the expiry of the session in which it is so laid or the session or sessions immediately following, both Houses agree in making any modification in the rule or both Houses agree that the rule shall not be made, the rule shall thereafter have effect only in such modified form or be of no effect, as the case may be; so, however, that any such modification or annulment shall be without prejudice to the validity of anything previously done or omitted to be done under that rule.

**15. Act not in derogation of other laws.-** The provisions of this Act shall be in addition to, and not in derogation of, any other law for the time being in force.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**16. Transitory provisions.-** (1)Notwithstanding anything contained in this Act, until the Recovery Commissioner is formally appointed under section 3, the State Government may, by order published in the official Gazette, designate existing officers of the Revenue Department, Police Department or the Department of Mines and Geology to discharge the functions of the Recovery Commissioner for a period not exceeding six months from the date of commencement of this Act.

(2) Any action taken, orders issued or proceedings initiated by officers so designated shall deemed to have been validly taken or done under the authority of this Act.

(3) The State Government shall ensure that the permanent institutional framework under this Act, including the appointment of the Recovery Commissioner, is established within six months from the date of commencement of this Act.

(4) The designated officers shall hand over all records, inventories, and pending matters to the duly appointed Recovery Commissioner immediately upon their assumption of office.

**17. Transfer of pending cases**.- From the date of commencement of this Act all cases pending before any court in respect of seizure, attachment of illegal mining activities, including properties derived from illegal mining activities including multiple transactions involving myriad number of lessees, transporters, exporters, stock holders, purchasers and other intermediaries, organized crime, cohesive conspiracy shall be transferred to the Recovery Commissioner.

**18. Power to remove difficulty.-** If any difficulty arises in giving effect to the provisions of this Act, the State Government may, by an order, published in the official Gazette, make such provisions not inconsistent with the provisions of this Act, which appear to it to be necessary or expedient for the purposes of removing the difficulty:

Provided that, no such order shall be made under this section after the expiry of the period of two years from the date of commencement of this Act.

The above translation of ಕರ್ನಾಟಕ ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕಾತಿ ಅಧಿನಿಯಮ, 2025 (2025ರ ಕರ್ನಾಟಕ ಅಧಿನಿಯಮ ಸಂಖ್ಯೆ: 45) be published in the official Gazette under Article 348 of the Constitution of India.

**THAAWARCHAND GEHLOT**
**GOVERNOR OF KARNATAKA**

By Order and in the name of
**the Governor of Karnataka,**

**G. Sridhar**
Secretary to Government
Department of Parliamentary Affairs
and Legislation

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH